ದಿನಾಂಕ: **16.08.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ವಿ ಎಸ್ ವಕೀಲರಿಂದಃ-

ಸ.ನಂ.12/4 ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಈ ಹಿಂದೆ ವೆಂಕಟರಾಯಪ್ಪ ಮತ್ತು ಕೆಂಪಲಯ್ಯ ರವರ ಹೆಸರಿನಲ್ಲಿ ಸ.ನಂ.14/4 ರಲ್ಲಿ ಆರ್ ಟಿ ಸಿ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸ.ನಂ.12 ಏಳು ಹಿಸ್ಸೆಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.12/1 ಗೊಲ್ಲಹಳ್ಳಿ ವೆಂಕಟಪ್ಪನವರಿಗೆ ಸೇರಿರುತ್ತದೆ ಎಂದರೆ ಸರಿ. ಸ.ನಂ.12/4 ಪೆಮ್ಮಕ್ಕ ಬಿನ್ ಪಾಪಯ್ಯನವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ಸ.ನಂ.12/3 ವೆಂಕಟರಾಯಪ್ಪ ಬಿನ್ ಕೆಂಪಯ್ಯನವರಿಗೆ ಸೇರಿತ್ತು ಎಂದರೆ ಸರಿ. ಸ.ನಂ.12/5 ವೆಂಕಟಮ್ಮ ಕೋಂ ನಾಗಪ್ಪನವರಿಗೆ ಸೇರಿತ್ತು ಎಂದರೆ ಸರಿ. ಸ.ನಂ.12/6 ಮುನಿರೆಡ್ಡಿ ಬಿನ್ ವೆಂಕಪ್ಪನವರಿಗೆ ಸೇರಿರುತ್ತದೆ ಎಂದರೆ ಸರಿ. ಸ.ನಂ.12/7 ವೆಂಕಟಮ್ಮ ಕೋಂ ನಾಗಪ್ಪನವರಿಗೆ ಸೇರಿರುತ್ತದೆ ಎಂದರೆ ಸರಿ.

2. ಸ.ನಂ.12/4 ವೆಂಕಟರಾಯಪ್ಪ ಬಿನ್ ಕೆಂಪಲಯ್ಯನವರಿಗೆ ಸೇರಿರಲಿಲ್ಲ ಎಂದರೆ ಸರಿಯಲ್ಲ. ಸ.ನಂ.12/4 ಪೆಮ್ಮಕ್ಕ ಬಿನ್ ಪಾಪಯ್ಯನವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಸ.ನಂ.12/3 ವೆಂಕಟರಾಯಪ್ಪ ರವರಿಗೆ ಸೇರಿತ್ತು ಎಂದರೆ ಸಾಕ್ಷಿಯು ಸ.ನಂ.12/2, ಸ.ನಂ.12/3, ಸ.ನಂ.12/4 ವೆಂಕಟರಾಯಪ್ಪನವರಿಗೆ ಸೇರಿತ್ತು ಎಂದು ಉತ್ತರಿಸಿರುತ್ತಾರೆ. ವೆಂಕಟರಾಯಪ್ಪ ನಾರಾಯಣಪ್ಪನಿಗೆ ಕ್ರಯ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪಾರ್ವತಮ್ಮ ಎಸ್ ನಾರಾಯಣಪ್ಪನವರು ನನ್ನ ತಂದೆಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

3. ನಿಪಿ.7 ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ಪೆಮ್ಮಕ್ಕ ಎಂಬ ಹೆಸರನ್ನು ನಾನು ಕೇಳಿರುವುದಿಲ್ಲ ಮತ್ತು ನಾನು ಅವರನ್ನು ನೋಡಿರುವುದಿಲ್ಲ. ಬಚ್ಚಮ್ಮ ಎಂಬ ಹೆಸರನ್ನು ನಾನು ಕೇಳಿರುತ್ತೇನೆ. ಸದರಿ ಬಚ್ಚಮ್ಮನವರನ್ನು ಪೆಮ್ಮಕ್ಕ ಸಾಕಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ವೆಂಕಟರಾಯಪ್ಪನ ಸೊಸೆ ಎಂದರೆ ಸರಿ. ಬಚ್ಚಮ್ಮನ ಗಂಡ ಅಕ್ಕುಲಪ್ಪ ಎಂದರೆ ಸರಿ. ಅವರು ಕೆಂಪನಹಳ್ಳಿಯಲ್ಲಿ ವಾಸವಿದ್ದರು.

**4.** ಪೆಮ್ಮಕ್ಕ ಬಚ್ಚಮ್ಮನಿಗೆ ಅರಿಶಿನ-ಕುಂಕುಮಕ್ಕಾಗಿ ದಿನಾಂಕ **28.11.1938** ರಲ್ಲಿ ದಾವಾ ಸ್ವತ್ತನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಬಚ್ಚಮ್ಮನ ಮರಣ ನಂತರ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವೆಂಕಟರಾಯಪ್ಪ ಸ.ನಂ.**12/3** ಕ್ಕೆ ಮಾತ್ರ ಮಾಲಿಕರಾಗಿದ್ದು, ಅದನ್ನು ಬಿಟ್ಟು ದಾವಾ ಸ್ವತ್ತನ್ನು ಮೋಸದಿಂದ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಪ್ರತಿವಾದಿಗಳು ನಮ್ಮ ಸ್ವತ್ತು ಎಂದು ದಾವಾ ಸ್ವತ್ತಿಗೆ ತೊಂದರೆ ನೀಡುತ್ತಿದ್ದರಿಂದ ಸಲ್ಲಿಸಿರುತ್ತೇನೆ.

**5.** ಬಚ್ಚಮ್ಮನ ತಂದೆ ವೆಂಕಟರಾಯಪ್ಪ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ರೀತಿ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಕಲಿ ದಾಖಲೆಯ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.